ಹೋಗಿ ಇನ್ಸ್‌ಪೆಕ್ಷನ್ ಮಾಡಿ ಬಂದು ಅಲ್ಲಿ ಬೆಳೆಯೇ ಇಲ್ಲವೆಂದು ವರದಿ ಕೊಡುವಂತಹ ಸಂಭವ ಇರುತ್ತದೆ ಎಂದು ಅವರು ಹೇಳಿದರು. ಸಾಮಾನ್ಯವಾಗಿ ಇನಾಂದಾರ್ ರವರು ಆಗಾಗ್ಗೆ ಎದ್ದು ನಿಂತು ಅದೂ ಇದೂ ಮಾತನಾಡಲಿಕ್ಕೆ ಹೋಗುವುದಿಲ್ಲ. ಈ ರೀತಿ ಅಪರೂಪಕ್ಕೆ ಯಾವಾಗಲಾದರೂ ಒಂದು ಸಲ ಮಾತನಾಡಲಿಕ್ಕೆ ಅವಕಾಶ ಕೇಳುತ್ತಾರೆ. ಬಹಳ ಜವಾಬ್ದಾರಿಯಿಂದಲೇ ಅವರು ಈ ಮಾತನ್ನು ಹೇಳಿರುತ್ತಾರೆ. ಆದ್ದರಿಂದ ತಾವು ಕೂಡಲೇ ನಿಮ್ಮ ಅಧಿಕಾರಿಗಳಿಗೆ ನಾಳೆಯೇ ಸ್ಥಳಕ್ಕೆ ಹೋಗುವುದಕ್ಕೆ ಸೂಚನೆ ಕೊಡಿ.

ಶ್ರೀ ಡಿ. ಮಂಜುನಾಥ್ :— ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದಂತೆ ಮುಖ್ಯಸ್ಥರಿಗೆ ಇವತ್ತೇ ಅಲ್ಲಿ ಬೆಳೆ ಹಾನಿಯಾಗುವ ಬಗ್ಗೆ ವರದಿ ತರಿಸಲು ಹೇಳಿದ್ದೇನೆ. ಮಾಹಿತಿಯನ್ನು ತರಿಸಿಕೊಂಡು ಅವರಿಗೆ ಪರಿಹಾರ ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಒಂದು ಎಕರೆ ಕಬ್ಬು ನಾಶವಾದರೆ ರೈತರಿಗೆ ಅಪಾರವಾದ ಹಾನಿಯಾಗುತ್ತದೆ. ಅದಕ್ಕೆ ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ :— ಈಗಿರುವ ನಾರ್ಮ್ಸ್ ಪ್ರಕಾರ ಗರಿಷ್ಠ 12 ಸಾವಿರ ರೂ.ಗಳಿಗಿಂತ ಹೆಚ್ಚು ಕೊಡಲು ಸಾಧ್ಯವಿಲ್ಲ.

ಶ್ರೀ ಡಿ.ಬಿ. ಇನಾಂದಾರ್ :— ಒಂದು ಎಕರೆ ಕಬ್ಬಿನ ಬೆಳೆ ಹಾಳಾದರೆ ರೈತನಿಗೆ ಸುಮಾರು 40-50 ಸಾವಿರ ರೂ.ಗಳ ಹಾನಿಯಾಗುತ್ತದೆ. 12 ಸಾವಿರ ರೂ.ಗಳು ಕೊಟ್ಟರೆ ಅದು ಏನೇನೂ ಸಾಲುವುದಿಲ್ಲ.

ಶ್ರೀ ಡಿ. ಮಂಜುನಾಥ್ :— ಈಗಿನ ನಾರ್ಮ್ಸ್ ಪ್ರಕಾರ 12 ಸಾವಿರ ರೂ.ಗಳಿಗಿಂತ ಹೆಚ್ಚು ಕೊಡಬಾರದು ಎಂದು ಇದೆ. ತಾವು ಹೇಳಿದ್ದರ ಬಗ್ಗೆ ಪರಿಶೀಲನೆ ಮಾಡೋಣ.

(ಊ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಅಕ್ವಾಯ್ ಅನುದಾನ ಬಿಡುಗಡೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣ) :— ಹುಬ್ಬಳ್ಳಿ ಮಾನ್ಯ ಅಧ್ಯಕ್ಷರೇ, ನಮ್ಮ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ಸರ್ಕಾರದಿಂದ ಈ ವರ್ಷ ಏನೊಂದು ಅಕ್ವಾಯ್ ಅನುದಾನ ಬರಬೇಕಾಗಿತ್ತೋ ಅದರಲ್ಲಿ 12 ಕೋಟಿ ರೂ.ಗಳು ಇನ್ನೂ ಕೊಡುವುದು ಬಾಕಿ ಇದೆ. ಇದರ ಬಗ್ಗೆ ನಾವು ಬಹಳಷ್ಟು ಸಲ ಹೇಳಿಕೊಂಡು ಬಂದಿದ್ದೇವೆ. ಈ ಬಗ್ಗೆ ನಮ್ಮ ಉಸ್ತುವಾರಿ ಸಚಿವರಾದಂತಹ ಎಸ್.ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಇಲ್ಲಿನ ನಿಯೋಗದ ಜೊತೆಗೆ ಸಭೆ ನಡೆಸಲಾಯಿತು. ಈ ಸಭೆಗೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ಇಷ್ಟೊಂದು ಹಣ ಬಾಕಿ ಬರಬೇಕಾಗಿದೆ ಎಂದು

ಹೇಳಿದಾಗ, ಬಾಕಿ ಇರುವುದು ನಿಜ, ನಾವು ಅದನ್ನು ಕೊಡುತ್ತೇವೆ ಎಂದು ಸರ್ಕಾರ ಒಪ್ಪಿಕೊಂಡಿತ್ತು. 31ನೇ ಮಾರ್ಚ್ 1999 ರೊಳಗಾಗಿ ಈ 12 ಕೋಟಿ ರೂ.ಗಳ ಹಣವನ್ನು ಸರ್ಕಾರ ಪೂರ್ತಿಯಾಗಿ ಬಿಡುಗಡೆ ಮಾಡಬೇಕು. ಆದರೆ ಇವತ್ತಿನವರೆಗೂ ಸರ್ಕಾರ ಆ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಅಲ್ಲಿಯ ಶಾಸಕರಾದ ನಾವು ಒಮ್ಮೆ ಧರಣಿ ಸತ್ಯಾಗ್ರಹ ಮಾಡಿದ್ದೇವೆ. ಹಲವಾರು ಬಾರಿ ಪತ್ರ ವ್ಯವಹಾರಗಳನ್ನೂ ಸಹಾ ಈ ಬಗ್ಗೆ ನಡೆಸಿದ್ದೇವೆ. ಆದರೂ ಕೂಡ ಸರ್ಕಾರ ಈ ಬಗ್ಗೆ ಎಳ್ಳಷ್ಟೂ ಕೂಡ ಕಾಳಜಿ ವಹಿಸದೇ ಆ ಹಣ ಬಿಡುಗಡೆ ಮಾಡುತ್ತಿಲ್ಲ. ಹಣ ಬಿಡುಗಡೆಯಾಗದೇ ಹುಬ್ಬಳ್ಳಿ-ಧಾರವಾಡದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ. ಮಾನ್ಯ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಅವರು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು 12 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಈಗಾಗಲೇ ಸಂಬಂಧಪಟ್ಟ ಎಲ್ಲರನ್ನೂ ಕರೆದು ಮೀಟಿಂಗ್ ಮಾಡಿದ್ದೇನೆ. ಇದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಈಗ ಸ್ವಲ್ಪ ಹೆಚ್ಚಿಗೆ ರಿಲೀಸ್ ಮಾಡಿದ್ದಾರೆ. ನಾನು ಆ ಹಣವನ್ನು ಸಂಪೂರ್ಣವಾಗಿ ರಿಲೀಸ್ ಮಾಡಿಸಿ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ತಾವು ಯಾವಾಗ ಮಾಡಿಸಿಕೊಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ :— ಮಾರ್ಚ್‌ನೊಳಗಾಗಿಯೇ ಆ ಹಣ ಬಿಡುಗಡೆ ಮಾಡಿಸುತ್ತೇನೆ.

ಅಧ್ಯಕ್ಷರು :— ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವು ಮೊದಲ ಬಾರಿಗೆ ಶಾಸಕರಾಗಿದ್ದೀರಿ. ನೀವು ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸಿ, ಇವತ್ತೇ ಇಷ್ಟು ಗಳಿಗೆ ಇಷ್ಟು ಹಣ ರಿಲೀಸ್ ಮಾಡಿ ಎಂದು ಕೇಳುವುದಕ್ಕೆ ಬರುವುದಿಲ್ಲ. ಮಾನ್ಯ ಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿಸಿಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟ ಮೇಲೆ ಅದು ಸರ್ಕಾರದ ಪರವಾದಂತಹ ಭರವಸೆಯಾಗಿರುತ್ತದೆ. ಆದಷ್ಟು ಶೀಘ್ರ ಮಾಡಿಸಿ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದೇ ಭರವಸೆಯನ್ನು ಅಂದಿನ ಸಭೆಯಲ್ಲೂ ಕೂಡ ಮಾನ್ಯ ಮಂತ್ರಿಗಳು ನೀಡಿದ್ದರು. ಬೆಂಗಳೂರು ಮತ್ತು ಮೈಸೂರು ಮಹಾನಗರಪಾಲಿಕೆಗಳಿಗೆ ಈಗಾಗಲೇ ಒಂದು ಪೈಸೆಯೂ ಕೂಡ ಬಾಕಿ

ಇಲ್ಲದಂತೆ ಹಣ ಬಿಡುಗಡೆ ಮಾಡಲಾಗಿದೆ. ಆದರೆ ನಮ್ಮ ಉತ್ತರ ಕರ್ನಾಟಕದ ಮಹಾನಗರಸಭೆಗಳಿಗೆ ಹಣ ಬಿಡುಗಡೆ ಮಾಡಲು ತಾರತಮ್ಯ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕರ್ನಾಟಕದವರೇ. ಅವರೂ ಕೂಡ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು :— ಆದಷ್ಟು ಬೇಗ ಹಣ ಬಿಡುಗಡೆ ಮಾಡಿಸಿಕೊಡುತ್ತಾರೆ ಬಿಡಿ.

(ಐ) ಹಳೆಯ ಪಿ.ಪಿ. ಸೆಟ್‌ಗಳಿಗೆ ಮೀಟರ್ ಅಳವಡಿಸಿ ಹಣ ವಸೂಲಿ ಮಾಡುತ್ತಿರುವುದರ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) :— ಮಾನ್ಯ ಅಧ್ಯಕ್ಷರೆ, ರೈತರ ಪಂಪುಸೆಟ್ಟುಗಳಿಗೆ ಮೀಟರನ್ನು ಅಳವಡಿಸಬೇಕೆಂಬ ವಿಚಾರ ಬಂದಿದ್ದಾಗ ಅದರ ಬಗ್ಗೆ ಪ್ರತಿಭಟನೆ ಬಂದಿದ್ದರಿಂದ ಆ ಕೆಲಸವನ್ನು ಕೈಬಿಡಲಾಗಿತ್ತು. ಆದರೆ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವ ಯೋಜನೆಯಲ್ಲಿ ರೈತರಿಂದ ಮತ್ತು ಸ್ವಯಂ ಆರ್ಥಿಕ ಯೋಜನೆಯಲ್ಲಿ ಹಣವನ್ನು ತುಂಬಿದಂಥ ರೈತರಿಂದ, ಹಾಗೂ ಹೊಸದಾಗಿ ಅರ್ಜಿ ಕೊಟ್ಟಂಥ ರೈತರಿಂದ 950 ರೂ.ಗಳನ್ನು ಕೆ.ಇ.ಬಿ. ನವರು ವಸೂಲಿ ಮಾಡುತ್ತಿದ್ದಾರೆ. ಇದು ಸದನದ ನಿರ್ಣಯಕ್ಕೆ ವಿರೋಧವಾಗಿದೆ. ಆ ರೀತಿ ವಸೂಲಿ ಮಾಡಿದಂಥ ಹಣವನ್ನು ವಾಪಸ್ ಕೊಡಬೇಕು. ಇನ್ನು ಮುಂದೆ ಆ ರೀತಿ ವಸೂಲಿ ಮಾಡದಂತೆ ಆದೇಶವನ್ನು ಹೊರಡಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಹೋದ ವರ್ಷವೇ ಹಳೆಯ ಐ.ಪಿ. ಸೆಟ್ಟುಗಳಿಗೆ ಮೀಟರ್ ಗಳನ್ನು ಅಳವಡಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಅದರ ಬಗ್ಗೆ ಎಲ್ಲಾ ಕಡೆಗಳಿಂದ ವಿರೋಧ ವ್ಯಕ್ತವಾದಾಗ ಮುಖ್ಯಮಂತ್ರಿಗಳು ಇದನ್ನು ಕೈಬಿಟ್ಟಿದ್ದರು. ಹಳೆಯದಕ್ಕೆ ನಾವು ಮೀಟರ್ ಗಳನ್ನು ಅಳವಡಿಸಿ ಹಣವನ್ನು ವಸೂಲಿ ಮಾಡುತ್ತಿಲ್ಲ. ಆದರೆ ಇವರು ಹೊಸ ಸಂಪರ್ಕದ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ ಹಿಂದೆ ನಾವು ಹೊಸ ಸಂಪರ್ಕದ ಬಗ್ಗೆ ಯಾವುದೇ ಭರವಸೆಯನ್ನು ಕೊಟ್ಟಿರಲಿಲ್ಲ. ಹೊಸ ಸಂಪರ್ಕದವರಿಗೆ ಮೀಟರ್ ಗಳನ್ನು ಅಳವಡಿಸುತ್ತಿದ್ದೇವೆ. ಆದರೆ ಸದನದಲ್ಲಿ ಹಿಂದೆ ಕೊಟ್ಟ ಆಶ್ವಾಸನೆಯಂತೆ ಹಳೆಯ ಐ.ಪಿ. ಸೆಟ್ ಗಳಿಗೆ ನಾನೇನೂ ಮಾಡಲು ಹೋಗಿಲ್ಲ. ಒಂದು ವೇಳೆ ಸದನದಲ್ಲಿ ಆ ರೀತಿ ಭರವಸೆ ಕೊಟ್ಟರೆ ಎಲ್ಲರಿಗೂ ಹಣವನ್ನು ವಾಪಸ್ ಕೊಡುವ ವ್ಯವಸ್ಥೆ ಮಾಡುತ್ತೇವೆ.